**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ಯವರ ನ್ಯಾಯಾಲಯ ,**

**ಮುಳಬಾಗಿಲು**

**ಸಿ.ಸಿ. ನಂಬರ್ 153/2008**

**ಫ್ರಾಸಾಃ1**

ದಿನಾಂಕಃ25.02.2026

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಬಿಸಿ. ನಾಗರಾಜು |
| ತಂದೆಯ ಹೆಸರು | : | ಚಿಕ್ಕ ಮುನಿಯಪ್ಪ |
| ವಯಸ್ಸು | : | 64 ವರ್ಷ |
| ಉದ್ಯೋಗ | : | ನಿವೃತ ಪೋಲೀಸ್ ಅಧಿಕಾರಿ |
| ವಾಸ ಸ್ಥಳ | : | ಬಂಗಾರಪೇಟೆ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

ಭಾ. ದಂ. ಪ್ರ, ಸಂ, ಕಲಂ 299 ಸಿ ಆರ್ ಪಿ ಸಿ ರಡಿಯಲ್ಲಿ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ

2008 ರಿಂದ 2012 ರವರೆಗೆ ನಂಗಲಿ ಪೊಲೀಸ್ ಠಾಣೆಯಲ್ಲಿ ಎಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯದಿಂದ ಒಂದು ಉದ್ಘೋಷಿತ ವಾರೆಂಟ್ ಅನ್ನು ಆರೋಪಿ 2 ಚಂದ್ರ ಅಲಿಯಾಸ್ ಚಂದ್ರಪ್ಪ, ಬಿನ್ ಕೋಲಾರಪ್ಪ ಎಂಬುವರ ವಿರುದ್ಧ ಹೊರಡಿಸಿದ್ದು, ಅದನ್ನು ನಾನು ಪಡೆದುಕೊಂಡು ದಿಃ 20.11.2009 ರಂದು ರಾಮಸಂದ್ರ ಮಂಡಲ್ ಪ್ಯಾಢರಾಸಪಲ್ಲಿ, ಗೋಶಾರ್ಲಪಲ್ಲಿ, ಪುಂಗನೂರು ತಾಲ್ಲೂಕು, ಚಿತ್ತೂರುಜಿಲ್ಲೆ ಭೇಟಿ ನೀಡಿದ್ದು, ಅಲ್ಲಿನ ಸಾರ್ವಜನಿಕರನ್ನು ವಿಚಾರಿಸಲಾಗಿದ್ದು, ಆರೋಪಿಯ ಬಗ್ಗೆ ಯಾವುದೇ ವಿಚಾರಗಳು ಗೊತ್ತಾಗದೇ ತಲೆಮರೆಸಿಕೊಂಡಿರುವುದಾಗಿ ತಿಳಿದು ಬಂದಿರುತ್ತದೆ. ಆ ಕಾರಣದಿಂದ

ನಾನು 30 ದಿನದೊಳಗೆ ನ್ಯಾಯಾಲಯಕ್ಕೆ ಹಾಜರಾಗಬೇಕೆಂದು ಹೇಳಿ ಟಾಂ ಟಾಂ ಮೂಲಕ ಪ್ರಚಾರ ಪಡಿಸಿದ್ದು, ನಂತರ ಉದ್ಘೋಷಿತ ವಾರೆಂಟಿನ ಪ್ರತಿಯನ್ನು ರಾಮಸ್ವಾಮಿ ದೇವಾಲಯದ ಹೊರಗೆ ಮತ್ತು ಮುಖ್ಯ ಬೀದಿಗಳಲ್ಲಿ ಲಗತ್ತಿಸಲಾಗಿದ್ದು, ನಂತರ ಸ್ಥಳದಲ್ಲಿ ಉದ್ಘೋಷಿತ ಮಹಜರ್ ಅನ್ನು ಬೆಳಿಗ್ಗೆ 11.30 ರಿಂದ 12.30 ಗಂಟೆಯವರೆಗೆ ಪಂಚರ ಸಮಕ್ಷಮ ತಯಾರಿಸಿ ಪಂಚರ ಸಹಿಯನ್ನು ಪಡೆದುಕೊಂಡಿರುತ್ತೇನೆ. ನಂತರ ಉದ್ಘೋಷಿತ ಪಂಚನಾಮೆ ಹಾಗೂ ವಾರೆಂಟಿನ ಪ್ರತಿಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ಸಾಕ್ಷಿ ಈ ದಿನ ವಾರೆಂಟ್ ಅನ್ನು ಹಾಗೂ ಉದ್ಘೋಷಿತ ಪ್ರತಿಯನ್ನು ನೋಡಿ ಗುರುತಿಸಿದ್ದು, ವಾರೆಂಟ್ ಅನ್ನು ನಿಪಿ-1 ಎಂದು ಗುರುತಿಸಲಾಯಿತು. ಉದ್ಘೋಷಿತ ಪ್ರತಿಯನ್ನು ನಿಪಿ2 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ 2(ಎ)ಎಂದು ಗುರುತಿಸಲಾಯಿತು. ತಹಶೀಲ್ದಾರವರ ವರದಿಯನ್ನು ನಿಪಿ-3 ಎಂದು ಗುರುತಿಸಲಾಯಿತು.

ಆರೋಪಿ ತಲೆಮರೆಸಿಕೊಂಡಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ
ಸಹಿ/-

1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ. ದ. ನ್ಯಾ ದಂ. ಮುಳಬಾಗಿಲು